**<u>ದಿನಾಂಕಃ 28-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಜಿ.ಜಿ.ಜಿ. 7 ಮತ್ತು 8 ನೇ ಪ್ರತಿವಾದಿಯರ ಪರ ವಕೀಲರಿಂದಃ</u>**

1. ನಮ್ಮ ಮನೆತನದ ಮೂಲ ಪುರುಷ ಕೊಟ್ರಗೌಡ ಕರೇಗೌಡ. ಸದರಿಯವರು 2007 ರಲ್ಲಿ ಮರಣ ಹೊಂದಿರುತ್ತಾರೆ. ತಾರೀಖು ನೆನಪಿಲ್ಲ. ಸದರಿಯವರು ಮರಣ ಹೊಂದಿದ ನಂತರ ನಮ್ಮ ಮನೆತನಕ್ಕೆ ಸರ್ವೆ ನಂ.81/4 ರಲ್ಲಿ 2 ಎಕರೆ 3 ಗುಂಟೆ ಹಾಗೂ 83/1 ಅ/1 ರಲ್ಲಿ 1 ಎಕರೆ 5 ಗುಂಟೆ, ದೇವಗಿರಿ ಯಲ್ಲಾಪೂರದಲ್ಲಿ ಪಂಚಾಯತಿ ಆಸ್ತಿ ಸಂಖ್ಯೆ 45/1 ರಲ್ಲಿ ಮನೆ ಮತ್ತು ಸ್ವಲ್ಪ ಖುಲ್ಲಾ ಜಾಗೆ ಇರುತ್ತದೆ. ಸದರಿ ಸರ್ವೆ ನಂ. 81/4 ಮತ್ತು 83/1 ಅ/1 ಇವುಗಳು ದೇವಗಿರಿ ಯಲ್ಲಾಪೂರದಲ್ಲಿ ಇರುವಂತಹ ಆಸ್ತಿಗಳು ಎಂದರೆ ಸರಿ. ನಮ್ಮ ಅಜ್ಜ ಮರಣ ಹೊಂದಿದ ನಂತರ ಸದರಿ ಆಸ್ತಿಗಳನ್ನು ಯರ ಹೆಸರಿನಲ್ಲಿಯೂ ಮಾಡಿಸಿಲ್ಲ, ನನ್ನ ಅಜ್ಜನ ಹೆಸರಿನಲ್ಲಿಯೇ ಇವೆ. ಆ ರೀತಿ ನನ್ನ ಅಜ್ಜನ ಹೆಸರಿನಲ್ಲಿಯೇ ಸದರಿ ಆಸ್ತಿಗಳು ಇವೆ ಎನ್ನುವುದಕ್ಕೆ ಉತಾರಗಳನ್ನು ಹಾಜರು ಮಾಡಿದ್ದೇನೆ. ನಿ.ಪಿ.1 ಮತ್ತು 2 ನ್ನು ಸಾಕ್ಷಿಗೆ ತೋರಿಸಿದ್ದು, ಅವುಗಳನ್ನು ತಹಶೀಲ್ದಾರ ಕಛೇರಿಯಿಂದ ಪಡೆದಂತಹ ದಾಖಲೆಗಳಲ್ಲ, ಆನ್ ಲೈನ್ ಮೂಲಕ ಪಡೆದಂತಹ ದಾಖಲೆಗಳು ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ಮರಣ ಹೊಂದಿದ

ನಂತರ ಉತಾರಗಳನ್ನು ಹಾಜರು ಪಡಿಸಿಲ್ಲ, 2022 ರಲ್ಲಿ ಉತಾರಗಳನ್ನು ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ.

**2.** ಸದರಿ ಸರ್ವೆ ನಂ. 81/4 ಮತ್ತು 83/1 ಅ/1 ಜಮೀನುಗಳು ನನ್ನ ಅಜ್ಜನಿಗೆ ವಾರಸಾ ಪ್ರಕಾರ ಬಂದಿತ್ತು ಎಂದರೆ ಸರಿ. ನನ್ನ ಅಜ್ಜನ ತಂದೆಯವರು 4 ಜನ ಮಕ್ಕಳಿದ್ದು, ವಾರಸಾ ಪ್ರಕಾರ 4 ಜನರ ಹೆಸರಿನಲ್ಲಿ ಸದರಿ ಜಮೀನುಗಳು ಬಂದಿತ್ತು ಎಂದರೆ ಸರಿ. ನಂತರ 1975 ನೇ ಸಾಲಿನಲ್ಲಿ ನನ್ನ ಅಜ್ಜನ ತಮ್ಮ ಚಿಕ್ಕನಗೌಡ ಮರಣ ಹೊಂದಿದ್ದು, ಆ ನಂತರ 3 ಜನರ ಹೆಸರಿನಲ್ಲಿ ಖಾತೆ ಬಂದಿತ್ತು ಎಂದರೆ ಸರಿ. ಸದರಿ 3 ಜನರು ಸೇರಿ 1980 ನೇ ಸಾಲಿನಲ್ಲಿ ಜಮೀನುಗಳ ಬಗ್ಗೆ ವಾಟ್ನಿ ಮಾಡಿಕೊಂಡಿದ್ದರು ಎಂದರೆ ಸರಿ. ಆ ಪ್ರಕಾರ ದಾವಾ ಶೆಡ್ಯೂಲ್-ಎ ಆಸ್ತಿಗಳು ತನ್ನ ಅಜ್ಜನ ಭಾಗಕ್ಕೆ ಬಂದವು ಎಂದರೆ ಸರಿ. ನನ್ನ ಅಜ್ಜ, ತಂದೆ ಹಾಗೂ ಚಿಕ್ಕಪ್ಪ ಎಲ್ಲರೂ ಕೂಡಿಯೇ ದಾವಾ ಶೆಡ್ಯೂಲ್-ಬಿ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. 1 ನೇ ಮತ್ತು 2 ನೇ ಪ್ರತಿವಾದಿಯ ಹೆಂಡತಿ ಮಕ್ಕಳು, 6 ನೇ ಪ್ರತಿವಾದಿ ಎಲ್ಲರೂ ಅದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಈಗಲೂ ಅದೇ ಮನೆಯಲ್ಲಿ ವಾಸವಿದ್ದಾರೆಂದರೆ ಸರಿ.

**3.** ಈ ದಾವೆಯನ್ನು ಸಲ್ಲಿಸಲು 1 ಮತ್ತು 2 ನೇ ಪ್ರತಿವಾದಿಯರು ಹೇಳಿದ್ದರು ಎಂದರೆ ಸರಿಯಲ್ಲ. ವಕೀಲರಿಗೆ ಮಾಹಿತಿಯನ್ನು ಕೊಡಲು ನಾನೇ ಬಂದಿದ್ದೆ. ನನ್ನನ್ನು ಹೊರತು ಪಡಿಸಿ ಬೇರೆ ಯಾರು ಬಂದಿಲ್ಲ. ದಾವಾ ಆಸ್ತಿಗಳ

ವಹಿವಾಟನ್ನು ನಾನೇ 2023 ರವರೆಗೆ ಮಾಡಿರುತ್ತೇನೆ. ಆ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಲು ತೊದರೆ ಇಲ್ಲ. ನಮ್ಮ ಅಜ್ಜ ಜೀವಂತ ಇದ್ದಾಗ ದಾವಾ ಆಸ್ತಿಗಳನ್ನು ನನ್ನ ಅಜ್ಜ, ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಸಾಗುವಳಿ ಮಾಡುತ್ತಿದ್ದರು. ವಾರಸಾ ಪ್ರಕಾರ ನನ್ನ ಅಜ್ಜನ ಹೆಸರಿನಿಂದ ಖಾತೆ ಮಾಡಿಸಿಕೊಂಡಿಲ್ಲ. ದಿನಾಂಕಃ 22-12-2003 ರ ನಂತರ ದಾವಾ ಶೆಡ್ಯೂಲ್-ಎ ಜಮೀನುಗಳು ನಮ್ಮ ಕಬ್ಜಾ ವಹಿವಾಟಿನಲ್ಲಿ ಇಲ್ಲ ಎಂದರೆ ಸರಿಯಲ್ಲ.

**4.** ನನ್ನ ಅಜ್ಜ 1993 ನೇ ಸಾಲಿನಲ್ಲಿ ಸದರಿ ಜಮೀನುಗಳನ್ನು ಆಧಾರವಾಗಿಟ್ಟು ಎಮ್.ಜಿ.ಬ್ಯಾಂಕ್ ದೇವಗಿರಿಯಿಂದ ರೂ.5,000/- ಸಾಲ ಪಡೆದಿದ್ದರು ಎಂದರೆ ಸರಿ. ನಂತರ ದಿನಾಂಕಃ 08-09-2003 ರಲ್ಲಿ ರೂ.16,000/- ಗಳನ್ನು ಸದರಿ ಬ್ಯಾಂಕಿನಿಂದ ಸಾಲ ಪಡೆದಿದ್ದ ಎಂದರೆ ಸರಿ. ಸದರ ಸಾಲವನ್ನು ಹೊರತು ಪಡಿಸಿ ನನ್ನ ಅಜ್ಜನಿಗೆ ಕೈಗಡ ಸಾಲಗಳು ಬಹಳ ಆಗಿದ್ದವು ಎಂದರೆ ಸಾಕ್ಷಿಯು ಬ್ಯಾಂಕಿನಲ್ಲಿ ಮಾಡಿದ ಸಾಲವನ್ನು ಬಿಟ್ಟು ಬೇರೆ ಕೈಗಡ ಸಾಲ ಇರಲಿಲ್ಲ ಎಂದು ನುಡಿಯುತ್ತಾರೆ. ಬ್ಯಾಂಕಿನ ಸಾಲವನ್ನು ತೀರಿಸುವ ಸಲುವಾಗಿ ದಿನಾಂಕಃ 22-12-2003 ರಂದು ರೂ.1,28,000/- ಗಳಿಗೆ ದಾವಾ ಶೆಡ್ಯೂಲ್-ಎ 1 ಮತ್ತು 2 ನೇ ಆಸ್ತಿಗಳನ್ನು 7 ಮತ್ತು 8 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದರು ಎಂದರೆ

ಸರಿಯಲ್ಲ. ಸದರಿ ಆಸ್ತಿಗಳನ್ನು ಮನೆತನದ ಅಡಚಣೆ ಸಲುವಾಗಿ ಮತ್ತು ಸಾಲವನ್ನು ತೀರಿಸುವ ಸಲುವಾಗಿ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ.

**5.** ಸಾಕ್ಷಿಗೆ ನಿ.ಪಿ.5 ನ್ನು ತೋರಿಸಲಾಗಿ ಅದರಲ್ಲಿ ಇರುವಂತಹ ಸಹಿಗಳು ನನ್ನ ತಂದೆ ಮತ್ತು ಚಿಕ್ಕಪ್ಪನ ಸಹಿಗಳು ಅಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ. ನನ್ನ ತಂದೆ ಮತ್ತು ಚಿಕ್ಕಪ್ಪನಿಗೆ ಬಂದಂತಹ ಸಮನ್ಸನ್ನು ನಾನೇ ತೆಗೆದುಕೊಂಡಿರುತ್ತೇನೆ ಎಂದರೆ ಸರಿ. 1 ರಿಂದ 6 ನೇ ಪ್ರತಿವಾದಿಯರು ಯಾರು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸಾಕ್ಷಿಯು ಅವರ ಪರವಾಗಿ ನಾನೇ ಬಂದಿರುತ್ತೇನೆ ಎಂದು ನುಡಿಯುತ್ತಾರೆ. 7 ಮತ್ತು 8 ನೇ ಪ್ರತಿವಾದಿಯರಿಗೆ ನನ್ನ ಅಜ್ಜ ಜಮೀನುಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಬ್ಯಾಂಕನಲ್ಲಿ ಮಾಡಿರುವ ಸಾಲವನ್ನು ತೀರಿಸಿರುತ್ತಾರೆ ಎಂದರೆ ಸರಿ. 7 ಮತ್ತು 8 ನೇ ಪ್ರತಿವಾದಿಯರು ಸದರಿ ಜಮೀನುಗಳು ಖರೀದಿ ಮಾಡಿದ ನಂತರ ಬಿನ್ ಶೇತ್ಕಿ ಜಮೀನನ್ನಾಗಿ ಮಾಡಿರುತ್ತಾರೆಂದರೆ ಸರಿಯಲ್ಲ. ದಾವಾ ಶೆಡ್ಯೂಲ್-ಎ ಆಸ್ತಿಗಳು ಶೇತ್ಕಿ ಜಮೀನುಗಳಾಗಿ ಉಳಿದಿಲ್ಲ, ಬಿನ್ ಶೇತ್ಕಿ ಪ್ಲಾಟುಗಳಾಗಿರುತ್ತವೆ ಎಂದರೆ ಸರಿಯಲ್ಲ.

**6.** ನನ್ನ ತಂದೆ ನನ್ನ ಅಜ್ಜನ ಮೇಲೆ ದಾವೆಯನ್ನು ಮಾಡಿರುವುದು ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 84/2003 ದಾವೆಯನ್ನು ನನ್ನ ಅಜ್ಜ ಮತ್ತು 2 ರಿಂದ 6 ನೇ ಪ್ರತಿವಾದಿಯರ ವಿರುದ್ಧ ದಿವಾಣಿ ನ್ಯಾಯಾಲಯ, ಹಾವೇರಿಯಲ್ಲಿ ಹಾಕಿದ್ದರು ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ

ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆ ಚಾಲ್ತಿಯಲ್ಲಿರುವಾಗಲೇ ದಾವಾ ಶೆಡ್ಯೂಲ್-ಎ ಜಮೀನುಗಳನ್ನು ನನ್ನ ಅಜ್ಜ ಮತ್ತು 2 ರಿಂದ 6 ನೇ ಪ್ರತಿವಾದಿಯರು ಸೇರಿ 7 ಮತ್ತು 8 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಆ ನಂತರ ರಾಜೀಯಾಗಿ ದಾವೆಯನ್ನು ವಾಪಸ್ಸು ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ನನ್ನ ಅಜ್ಜ ಮನೆತನದ ಅಡಚಣೆಗಾಗಿ ಸದರಿ ಆಸ್ತಿಗಳನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ಸಾಲ ತೀರಿಸಿದ ವಿಚಾರ ನನಗೆ ಗೊತ್ತಿದ್ದರೂ ಸಹ ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**7.** ನನ್ನ ಅಜ್ಜ, ನನ್ನ ತಂದೆ ಮತ್ತು ಚಿಕ್ಕಪ್ಪನಾದ 1 ಮತ್ತು 2 ನೇ ಪ್ರತಿವಾದಿಯರು ದಾವಾ ಶೆಡ್ಯೂಲ್-ಎ ಆಸ್ತಿಗಳಿಂದ ಬಂದಂತಹ ಉತ್ಪನ್ನದಿಂದಲೇ ಉಪಜೀವನ ಮಾಡುತ್ತಿದ್ದರು ಎಂದರೆ ಸರಿ. ಸಾಲವನ್ನು ತೀರಿಸುವ ಸಲುವಾಗಿ ಸದರಿ ಆಸ್ತಿಗಳನ್ನು ಮಾರಾಟ ಮಾಡಿ ಸಾಲವನ್ನು ತೀರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಮಾರಾಟ ಮಾಡಿದ ಕಾಲಕ್ಕೆ ನಾನು 5 ವರ್ಷದವನಾಗಿದ್ದೆ ಎಂದರೆ ಸಾಕ್ಷಿಯು ಇಲ್ಲ ನಾನು 9 ವರ್ಷದವನಾಗಿದ್ದೆ ಎಂದು ನುಡಿದಿರುತ್ತಾರೆ. ನಾನು, 1 ರಿಂದ 6 ನೇ ಪ್ರತಿವಾದಿಯರು ಸೇರಿಕೊಂಡು ಮಿಲಾಪಿಯಾಗಿ ಈ ಸುಳ್ಳು ದಾವೆಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ದೇವಗಿರಿ ಯಲ್ಲಾಪೂರದಲ್ಲಿ ಡಿ.ಸಿ.

ಕಛೇರಿ ಆಗಿದ್ದರಿಂದ ಸದರಿ ಗ್ರಾಮದಲ್ಲಿರುವ ದಾವಾ ಶೆಡ್ಯೂಲ್ -ಎ ಜಮೀನುಗಳ ಮೌಲ್ಯ ಹೆಚ್ಚಾಗಿದ್ದು, 7 ಮತ್ತು 8 ನೇ ಪ್ರತಿವಾದಿಯರಿಗೆ ತೊಂದರೆ ಕೊಟ್ಟರೆ ಹೆಚ್ಚಿನ ಹಣ ಕೊಡುತ್ತಾರೆಂದು ಅವರ ವಿರುದ್ಧ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**(1, 2, 4 ಮತ್ತು 6 ನೇ ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಹಾಗೂ 3 ಮತ್ತು 5 ನೇ ಪ್ರತಿವಾದಿಯರು ಏಕಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.